“ಇವರಲ್ಲಿ ನಿಮಗೆ ಯಾರ್‍ಯಾರು ಗೊತ್ತು?” ಅಲ್ಲಿದ್ದ ಬಂಧುಗಳೆಂದು ಹೇಳಿಕೊಂಡವರ ಕಡೆ ತಿರುಗಿ ಕೇಳಿದರು ಇನ್‌ಸ್ಪೆಕ್ಟರ್.

“ರಜನಿ ಬಿಟ್ಟರೆ ಇನ್ಯಾರೂ ಗೊತ್ತಿಲ್ಲ. ಅದೂ ಅವರ ಆಸ್ತಿ ವಿಚಾರಕ್ಕೆ ಸ್ವಲ್ಪ ಮಾತುಕತೆ ಆಗಿತ್ತಾದ್ದರಿಂದ...’’

“ಜೀವನಾಂಶಕ್ಕೆ” ಅಲ್ಲಿಂದಲೆ ಕೂಗಿದಳು ರಜನಿ. ಅವಳ ಧ್ವನಿಯಲ್ಲಿಯೇ ಅವಳಿಗೆ ಲಾಯರ್ ಬಗ್ಗೆ ಇದ್ದ ಅಸಹನೆ ಗೊತ್ತಾಗುತ್ತಿತ್ತು.

“ಸರ್, ವಿಚಾರಣೆ ಮುಂದುವರೆಸುವಿರಂತೆ, ಮೊದಲು ಶವವನ್ನು ಪೋಸ್ಟ್‌ಮಾರ್ಟ್‌ಂಗೆ ಕಳುಹಿಸಿ. ಭಯಂಕರವಾಗಿದೆ ನೋಡಲು” ಸುನೀಲ್ ಅವರ ಮಾತುಗಳನ್ನು ತಡೆದ.

“ಸರಿ ಸರಿ ಅದನ್ನೇ ಮಾಡೋಣ.”

ಅವನ ಮಾತಿಗೇ ಕಾಯುತ್ತಿದ್ದಂತೆ ಸುನೀಲ್ ಶವವನ್ನು ಮುಟ್ಟಲು ಹೋದ. ಅವನನ್ನು ತಡೆಯುತ್ತಾ... ಇನ್‌ಸ್ಪೆಕ್ಟರ್ ನಾಗರಾಜಯ್ಯ,

“ಸ್ಟಾಪ್!... ನಿನ್ನ ಕೆಲಸ ನೀನು ನೋಡಿಕೋ... ಅದಕ್ಕೆ ನಮ್ಮವರಿದ್ದಾರೆ. ಹಾಗೆ ನೋಡಿದರೆ ನಿನ್ನ ಮೇಲೂ ಸಂಶಯ ಇದೆ. ಈ ಕೊಲೆ ನೀನೇ ಮಾಡಿರಬಹುದಲ್ಲವಾ...”

ಅವನ ಪೊಲೀಸ್ ಶೈಲಿಯ ಮಾತುಗಳನ್ನು ಕೇಳಿ ಒಂದು ಕ್ಷಣ ಎಲ್ಲರೂ ದಂಗಾದರು. ಎಲ್ಲರ ಮುಖದಲ್ಲಿಯೂ ಆತಂಕದ ಛಾಯೆ. ಏಸಿಯಲ್ಲಿ ನಿಂತಿದ್ದರೂ ಮುಖದಲ್ಲಿ ಬೆವರ ಸಾಲುಗಳು ಕಾಣಿಸಿಕೊಂಡವು.

ಎಲ್ಲರೆಡೆ ಒಮ್ಮೆ ನೋಡಿ... ನಾಗರಾಜಯ್ಯ, “ಇಲ್ಲಿರುವ ಎಲ್ಲರ ಮೇಲೂ ಸಂಶಯ ಬರುವಂಥದ್ದೇ. ಎಲ್ಲರೂ ನಿನ್ನೆ ರಾತ್ರಿ ಇಲ್ಲಿಗೆ ಬಂದಿದ್ದೀರ, ಎಲ್ಲರೂ ಈ ವ್ಯಕ್ತಿ ಕರೆ ಕಳುಹಿಸಿದ್ದಾನೆ ಎಂದು ಹೇಳುತ್ತಿದ್ದೀರ. ಅದೂ ಕೆಲಸದಾಕೆ ವಿಶಾಲಾಕ್ಷಮ್ಮನ ಕರೆಯಿಂದಾಗಿ. ಎಲ್ಲರಿಗೂ ಈ ವ್ಯಕ್ತಿಯ ಜೊತೆ ಒಂದಲ್ಲ ಒಂದು ರೀತಿಯ ದುಡ್ಡಿನ ವ್ಯವಹಾರ ಇದೆ. ನೀವೆಲ್ಲ ಅದೇ ಕಾರಣಕ್ಕೆ ಬಂದಿರಬಹುದು...”

“ಈ ಮನೆಗೆ ಬೇರೆಯವರು ಯಾರೂ ಬಂದಿಲ್ಲ. ಇಲ್ಲಿ ಕೊಲೆ ಆಗಿದೆ ಅಂದರೆ ನಿಮ್ಮಲ್ಲಿಯೇ ಯಾರಾದರೊಬ್ಬರು ಮಾಡಿರಬಹುದು ಇಲ್ಲವೇ ಇಲ್ಲದೆಯೂ ಇರಬಹುದು. ಆದರೆ ಇಲ್ಲಿ ಎಲ್ಲರ ಮೇಲೂ ಸಂಶಯ ಅಂತೂ ಬರುತ್ತಿದೆ.”

ಅವನ ಮಾತುಗಳನ್ನು ಮಧ್ಯದಲ್ಲಿಯೇ ತಡೆಯುತ್ತಾ ಲಾಯರ್ ನಾಗಭೂಷಣ... ‘‘ಸರ್ ಈಗ ಸಮಾರು ಒಂದೂವರೆ ತಿಂಗಳ ಹಿಂದೆ ವಿಶ್ವನಾಥ್ ಅವರು ತಮ್ಮ ಸಮಸ್ತ ಆಸ್ತಿಯನ್ನು ಈ ವಿಶಾಲಾಕ್ಷಮ್ಮನ ಹೆಸರಿಗೆ ವಿಲ್ ಮಾಡಿಸಿದ್ದರು. ನಾಲ್ಕು ದಿನದ ಹಿಂದೆ ಫೋನ್ ಮಾಡಿ ವಿಲ್ ಛೇಂಜ್ ಮಾಡಬೇಕು ಎಂದು ಕೂಡ ಹೇಳಿದ್ದರು...”

ಫೊರೆನ್ಸಿಕ್ ಆದಿಯಾಗಿ ಅಲ್ಲಿದ್ದ ಎಲ್ಲರೂ ವಿಶಾಲಾಕ್ಷಮ್ಮನೆಡೆ ತಿರುಗಿದರು. ಎಲ್ಲರಿಗೂ ಕೊಲೆಯ ಹಿಂದಿನ ಪ್ರೇರಣೆ ಸಿಕ್ಕಿತು ಎನಿಸತೊಡಗಿತು. ಆದರೆ ಅದನ್ನೆಲ್ಲ ಕೇಳಿಸಿಕೊಂಡೇ ಇಲ್ಲ ಎಂಬಂತೆ ವಿಶಾಲಾಕ್ಷಮ್ಮ ಅಳುತ್ತಾ ನಿಂತಿದ್ದರು.

ಮೊದಲು ಪ್ರತಿಕ್ರಿಯಿಸಿದ್ದು ರಜನಿ. “ಮಾವನ ತಲೆ ಕೆಡಿಸಿ ಇಡೀ ಆಸ್ತಿ ನುಂಗಲು ನೋಡ್ತಿದ್ದೀಯಾ’’ ಎಂದು ನಡುವೆ ಅವಾಚ್ಯ ಶಬ್ದವೊಂದನ್ನು ನುಡಿದಳು.

ಅಲ್ಲಿಯವರೆಗೂ ಶಾಂತಳಾಗಿಯೇ ಇದ್ದ ವಿಶಾಲಾಕ್ಷಮ್ಮ ಒಮ್ಮೆಲೇ ಅಬ್ಬರಿಸಿದಳು.

“ನೀವೆಲ್ಲಾ ಏನೂ ಅಂತ ನನಗೆ ಗೊತ್ತಿಲ್ಲವಾ. ಕಳೆದ ಎರಡು ವರ್ಷಗಳಿಂದ ಒಬ್ಬರೂ ಈ ಕಡೆ